**ಓ. ಎಸ್. ನಂ. 194-2016 PW-1**

ದಿನಾಂಕಃ 10-01-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಪಾಟೀ ಸವಾಲು ಃ 5 ನೇ ಪ್ರತಿವಾದಿ ಪರವಾಗಿ ಶ್ರೀ. ವಿ.ಆರ್.ಎಚ್ . ವಕೀಲರಿಂದಃ**

4. ನಾನು ಕ್ಷೌರಿಕ ಸಮುದಾಯಕ್ಕೆ ಮೀಸಲಾತಿ ಅಡಿಯಲ್ಲಿ ನನಗೆ ಅಂಗಡಿಯನ್ನು ಹಂಚಿಕೆ ಮಾಡುವಂತೆ ಕೋರಿ ಲಿಖಿತವಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದ್ರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದ್ರಿ ಅರ್ಜಿಗೆ ಗ್ರಾಮ ಪಂಚಾಯಿತಿಯಿಂದ ಯಾವುದೇ ಉತ್ತರ ನೀಡಿರುವುದಿಲ್ಲ. ತದನಂತರ ನಾನು ಉತ್ತರವನ್ನು ನೀಡಲು ಕೋರಿ ಪತ್ರವನ್ನು ನೀಡಿರುವುದಿಲ್ಲ. ಅರ್ಜಿಯನ್ನು ನೀಡಲು ಯಾವುದೇ ತೊಂದರೆ ಇರಲಿಲ್ಲ.

5. ಕ್ಷೌರಿಕ ವರ್ಗಕ್ಕೆ ಇರುವ ಮೀಸಲಾತಿಗೆ ಸಂಬಂಧಿಸಿದ ಸರಕಾರಿ ಆದೇಶವನ್ನು ಗ್ರಾಮ ಪಂಚಾಯಿತಿಗೆ ಹಾಜರುಪಡಿಸಿಲ್ಲ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಠರಾವು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗೆ ಬೇರೆ ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ನನ್ನ ತಂದೆಯು ಗ್ರಾಮ ಪಂಚಾಯಿತಿಯ ವ್ಯಾಪಾರ ಮಳಿಗೆಯಲ್ಲಿ ಕ್ಷೌರೀಕ ವೃತಿಯನ್ನು ಮಾಡುತ್ತಿದ್ದರು. ನಾನು ಸದ್ರಿ ಅಂಗಡಿಯನ್ನು ಮುಂದುವರಿಸಿಕೊಂಡು ಬಂದಿಲ್ಲ. 2016 ರಲ್ಲಿ ಗ್ರಾಮ ಪಂಚಾಯಿತಿಯವರು ಬಾಡಿಗೆ ತುಂಬಿಲ್ಲ ಎಂದು ಸದ್ರಿ ಅಂಗಡಿಯ ಕಬ್ಜೆಯನ್ನು ತೆಗೆದುಕೊಂಡಿರುತ್ತಾರೆ.

6. ಸರಿಯಾಗಿ ಬಾಡಿಗೆಯನ್ನು ತುಂಬುವಂತೆ ನನಗೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ. ಅದಕ್ಕೆ ಉತ್ತರವಾಗಿ ನಾನು ಬಾಡಿಗೆಯನ್ನು ಪಾವತಿಸಿರುವುದಿಲ್ಲ. ಎರಡೂ ನೋಟೀಸಗಳಿಗೆ ನಾನು ಲಿಖಿತವಾಗಿ ಉತ್ತರವನ್ನು ನೀಡಿರುವುದಿಲ್ಲ. ದಿಃ 16-11-2015 ರ ನೋಟೀಸ ನನಗೆ ತಲುಪಿದ್ದು, ಅದಕ್ಕೆ ಉತ್ತರವನ್ನು ನೀಡಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯಿತಿಯಿಂದ

ಮೌಖಿಕವಾಗಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ದಾವಾಸ್ತಿಯ ಬಗ್ಗೆ ಚರ್ಚೆ ಮಾಡಲು ಬರುವಂತೆ ತಿಳಿಸಿರುತ್ತಾರೆ. ಅವರು ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಅದಕ್ಕೆ ಸಂಬಂಧಿಸಿದ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನಾನು ಸದ್ರಿ ಸಭೆಯಲ್ಲಿ ಭಾಗವಹಿಸಿದ್ದು, ಅಲ್ಲಿ ಲಿಖಿತವಾಗಿ ಯಾವುದೇ ಅಹವಾಲನ್ನು ನೀಡಿರುವುದಿಲ್ಲ. ನಾನು ಸಭೆಯಲ್ಲಿ ಭಾಗವಹಿಸಿದ್ದೇ ಆದ್ದಲ್ಲಿ ಠರಾವಿನಲ್ಲಿ ನನ್ನ ಭಾಗವಹಿಸುವಿಕೆಯ ಬಗ್ಗೆ ನಮೂದಿಸುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಮೌಖಿಕವಾಗಿ ಅವರು ಕೇಳಿದ್ದು, ನಾನು ಉತ್ತರವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಂತರ ನಾನು ಸಭೆಯ ಮಧ್ಯದಿಂದಲೇ ಹೊರ ಹೋಗಿರುತ್ತೇನೆ ಎಂದರೆ ಸರಿ.

7. ನನಗೆ ಹಲವಾರು ಬಾರಿ ಗ್ರಾಮ ಪಂಚಾಯಿತಿಯಿಂದ ಬಾಕಿ ಬಾಡಿಗೆ ಹಣವನ್ನು ನೀಡುವಂತೆ ನೋಟೀಸ ನೀಡಿರುತ್ತಾರೆ ಎಂದರೆ ಸರಿ. ಯಾವ ಕಾರಣಕ್ಕೆ ನಾನು ಬಾಕಿ ಬಾಡಿಗೆ ಹಣವನ್ನು ನೀಡಿರುವುದಿಲ್ಲ ಎಂದು ಲಖಿತವಾಗಿ ಉತ್ತರವನ್ನು ನೀಡಿರುವುದಿಲ್ಲ. ನಾನು ನೋಟೀಸಗೆ ಸರಿಯಾಗಿ ಉತ್ತರವನ್ನು ನೀಡದೇ ಇದ್ದ ಕಾರಣ ಗ್ರಾಮ ಪಂಚಾಯಿತಿಯವರೇ ಸದ್ರಿ ಅಂಗಡಿಯ ಕಬ್ಜೆಯನ್ನು ವಾಪಾಸ ತೆಗೆದುಕೊಳ್ಳುವ ನಿರ್ಧಾರವನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದ್ರಿ ವಿಷಯವನ್ನು ಜೋಯಿಡಾ ಪೊಲೀಸರಿಗೆ, ತಹಶೀಲ್ದಾರ ಮತ್ತು ಇ.ಓ ರವರಿಗೆ ತಿಳಿಸಿರುತ್ತಾರೆ ಎಂದರೆ ಸರಿ.

8. ದಿಃ 26-07-2016 ರಂದು ದಾವಾಸ್ತಿಯ ಬಾಗಿಲನ್ನು ಪಂಚರ ಸಮಕ್ಷಮ ಕಂದಾಯ ಇಲಾಖೆಯವರು, ಪೊಲೀಸರು, ಹಾಗೂ ಇತರೇ ಸರಕಾರಿ ಅಧಿಕಾರಿಗಳು ಸೇರಿ ಒಡೆದು , ಒಳಗೆ ಇದ್ದ ಸಾಮಾನುಗಳ ಪಟ್ಟಿ ಮಾಡಿ, ಪಂಚನಾಮೆ ಜರುಗಿಸಿ ಕಬ್ಜೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರು ಸಹ ಹಾಜರು ಇದ್ದರು

ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯಗಳು ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಮ್ಮ ವಕೀಲರ ಮೂಲಕ ತಹಶೀಲ್ದಾರರಿಗೆ, ಕಾರ್ಯ ನಿರ್ವಹಣಾ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನೋಟೀಸನ್ನು ನೀಡಿರುತ್ತೇನೆ ಎಂದರೆ ಸರಿ. ಅವರುಗಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಎಷ್ಟು ನೋಟೀಸನ್ನು ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲಾ. ಅವರು ಅದಕ್ಕೆ ಉತ್ತರವನ್ನು ನೀಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ನೀಡಿದ ಉತ್ತರವನ್ನು ಆರ್.ಟಿ.ಐ. ನಲ್ಲಿ ಪಡೆದುಕೊಳ್ಳಲು ನನಗೆ ಅವಶ್ಯಕತೆ ಅನಿಸಿರುವುದಿಲ್ಲ. ಅವರು ದಾವೆಯಲ್ಲಿ ತಕರಾರನ್ನು ಸಲ್ಲಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಾವೆಯಲ್ಲಿ ಜಿಲ್ಲಾಧಿಕಾರಿಗಳನ್ನು ಪಕ್ಷಗಾರರನ್ನಾಗಿ ಸೇರಿಸಿರುತ್ತೇನೆ.

10. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನ ಪಕ್ಷಗಾರರನ್ನಾಗಿ ಸೇರಿದ್ದು, ಗ್ರಾಮ ಪಂಚಾಯಿತಿಯನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ. ಅವರನ್ನು ಯಾವ ಕಾರಣಕ್ಕಾಗಿ ಮಾಡಿರುವುದಿಲ್ಲ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ನೀಡಿದ ಸುಳ್ಳು ಮಾಹಿತಿಯ ಮೇರೆಗೆ ಸುಳ್ಳು ನೋಟೀಸನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ.

11. ನಾನು ಹಾಜರು ಪಡಿಸಿದ ರಶೀದಿಗಳು 2015 ರಿಂದ 2016 ಸಂಬಂಧಿಸಿದ್ದಾಗಿರುತ್ತವೆ. ಅವುಗಳ ಮೇಲೆ ಮಳಿಗೆಗಳ ಸಂಖ್ಯೆ ನಮೂದಾಗಿರುವುದಿಲ್ಲ. ಸುಮಾರು ಎಷ್ಟು ರಶೀದಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನನಗೆ ನೆನಪಿಲ್ಲಾ. ದಾವಾಸ್ತಿಗೆ ಸಂಬಂಧಿಸಿದಂತೆ ಮುಂಗಡವಾಗಿ ಇಟ್ಟ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ವಾಣಿಜ್ಯ ಮಳಿಗೆಗಳಿಗೆ ಬಾಡಿಗೆ ಹಣವನ್ನು ಸಾಮಾನ್ಯ ಸಭೆಯಲ್ಲಿ ಚುನಾಯಿತ ಸದಸ್ಯರ ಸಮಕ್ಷಮ ನಿಗದಿಪಡಿಸಲಾಗುತ್ತದೆ ಎಂದರೆ ಸರಿ. ಅದೇ ರೀತಿ ನಮ್ಮ

ಅಂಗಡಿಗೂ ಸಹ ತಿಂಗಳ ಬಾಡಿಗೆ 800-00 ರೂಪಾಯಿ ಎಂದು ಹೆಚ್ಚು ಮಾಡಿ ನಿಗದಿ ಪಡಿಸಲಾಗಿರುತ್ತದೆ ಎಂದರೆ ಸರಿ. ತದನಂತರ ಸದ್ರಿ ಬಾಡಿಗೆ ಹಣವನ್ನು ನಾನು ಪಾವತಿಸಿರುವುದಿಲ್ಲ.

12. ವಿದ್ಯುತ ಬಿಲ್ಲಗಳನ್ನು ಯಾವ ಇಸವಿಗೆ ಸಂಬಂಧಿಸಿದಂತೆ ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲಾ. ನಾನು ಹಾಜರುಪಡಿಸಿದ ನಿಪಿ 22 ರಿಂದ ನಿಪಿ 28 ಬಿಲ್ಲಗಳು ಪಂಚಾಯಿತಿ ಕಾರ್ಯದರ್ಶಿಯವರ ಹೆಸರಿನಲ್ಲಿ ಇರುತ್ತದೆ . ಅದು ಯಾವ ಕಟ್ಟಡಕ್ಕೆ ಸಂಬಂಧಿಸಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ. 29 ರಿಂದ ನಿಪಿ. 34 ಬಿಲ್ಲಗಳು ಪಂಚಾಯಿತಿ ಕಾರ್ಯದರ್ಶಿಯವರ ಹೆಸರಿನಲ್ಲಿ ಇರುತ್ತದೆ. ಅದು ಸಹ ನಮ್ಮ ಮಳಿಗೆಗೆ ಸಂಬಂಧಿಸಿದ್ದಾಗಿರುತ್ತದೆ. ನಿಪಿ. 30 ರಲ್ಲಿ ಪಂಚಾಯಿತಿ ಕಾರ್ಯದರ್ಶಿಯವರ ಹೆಸರು ಇರುತ್ತದೆ. ಅದು ಯಾವ ಕಟ್ಟಡಕ್ಕೆ ಸಂಬಂಧಿಸಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ.

13. ಪಂಚಾಯಿತಿಯವರು ಕ್ಷೌರಿಕ ವರ್ಗಕ್ಕೆ ಯಾವುದೇ ಯೋಜನೆ ಇದ್ದಲ್ಲಿ ಉಚಿತವಾಗಿ ಕ್ಷೌರಿಕ ಅಂಗಡಿಯನ್ನು ಕಟ್ಟಿಕೊಡುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿ. ನಿಪಿ 14 ರಲ್ಲಿ ಮೀಸಲಾತಿ ಅಡಿಯಲ್ಲಿ ಇಲ್ಲಿಯವರೆಗೆ ಯಾರಿಗೂ ಸಹ ಅಂಗಡಿಯನ್ನು ನೀಡಿಲ್ಲ, ನಾನು ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಕಚೇರಿಗೆ ಬಂದು ಚರ್ಚಿಸಿ ಬೇರೆ ಕಡೆಯಲ್ಲಿ ಶೆಡ್ ನಿರ್ಮಾಣ ಮಾಡಲು ಶಿಫಾರಸು ಮಾಡಲು ತಿಳಿಸಿರುತ್ತಾರೆ ಎಂದರೆ ಸರಿ. ನಾನು ಅದರಂತೆ ಕಚೇರಿಗೆ ಹೋಗಿ ಚರ್ಚೆ ಮಾಡಿಲ್ಲ.

14. ನಾನು ಲೋಕಾಯುಕ್ತ ಕಚೇರಿಗೆ ಈ ವಿಷಯವಾಗಿ ದೂರನ್ನು ನೀಡಿರುತ್ತೇನೆ. ಗ್ರಾಮ ಪಂಚಾಯಿತಿಯಿಂದ ಲೋಕಾಯುಕ್ತ ಕಚೇರಿಗೂ ಸಹ ನಾನು ಯಾವ ಯೋಜನೆ ಅಡಿಯಲ್ಲಿ ಕ್ಷೌರಿಕ ಅಂಗಡಿಯನ್ನು ಕಟ್ಟಿಕೊಡುವಂತೆ ತಿಳಿಸಿರುವುದಿಲ್ಲ ಎಂದು ಉತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ನಿಪಿ 18 ರಲ್ಲಿ ಜಿಲ್ಲಾ ಪಂಚಾಯಿತಿಯವರು ತಾಲೂಕು ಪಂಚಾಯಿತಿಯವರಿಗೆ ನೋಟೀಸನಲ್ಲಿ ತಿಳಿಸಿದ ವಿಷಯಗಳಿಗೆ ಕುರಿತು ಸೂಕ್ತ ಕ್ರಮ ವಹಿಸಿ ಅರ್ಜಿದಾರರರಿಗೆ ಹಿಂಬರಹ ನೀಡುವಂತೆ

ಸೂಚಿಸಿರುತ್ತಾರೆ ಎಂದರೆ ಸರಿ. ನಿಪಿ. 19 ರಲ್ಲಿ ಜಿಲ್ಲಾಧಿಕಾಯವರಿಂದ ತಹಶೀಲ್ದಾರರವರಿಗೆ ಸೂಕ್ತ ಕ್ರಮ ವಹಿಸಿ ವರದಿ ನೀಡುವಂತೆ ತಿಳಿಸಿರುತ್ತಾರೆ ಎಂದರೆ ಸರಿ. ಈ ವಿಷಯವಾಗಿ ತಹಶೀಲ್ದಾರ ಹಾಗೂ ತಾಲೂಕು ಪಂಚಾಯಿತಿಯವರು ಯಾವ ಕ್ರಮಗಳನ್ನು ಕೈಗೊಂಡಿರುತ್ತಾರೆಂದು ಎಂದು ತೋರಿಸಲು ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ. ನಿಪಿ. 20 ರಲ್ಲಿ ಜಿಲ್ಲಾಧಿಕಾರಿಯವರಿಂದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿರವರಿಗೆ ಸೂಕ್ತ ಕ್ರಮ ವಹಿಸಿ ವರದಿ ನೀಡುವಂತೆ ತಿಳಿಸಿರುತ್ತಾರೆ ಎಂದರೆ ಸರಿ.

15. ನಿಪಿ. 21 ರ ಅನುಸಾರ ನಾನು ಯಾವುದೇ ಬಾಡಿಗೆ ಹಣವನ್ನು ಪಾವತಿಸಿರುವುದಿಲ್ಲ. ನಿಪಿ 13 ಪತ್ರವನ್ನು ನನ್ನ ಒತ್ತಡದ ಮೇಲೆ ಅನುಕೂಲವಾಗುವಂತೆ ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕ್ಷೌರಿಕ ವರ್ಗಕ್ಕೆ ಉಚಿತವಾಗಿ ಯಾವುದೇ ಮಳಿಗೆಯನ್ನು ನೀಡಬೇಕೆಂದು ಯಾವುದೇ ಸರಕಾರಿ ಆದೇಶ ಇರುವುದಿಲ್ಲ ಎಂದರೆ ಸರಿಯಲ್ಲ. ಈ ವಿಷಯ ತಿಳಿದಿದ್ದರೂ ಸಹ ಪದೇ ಪದೇ ಗ್ರಾಮ ಪಂಚಾಯಿತಿಗೆ ಪತ್ರವನ್ನು ಬರೆಯುತ್ತಿದ್ದೇನು ಎಂದರೆ ಸರಿಯಲ್ಲ. ಪಂಚಾಯಿತಿ ಅಧಿಕಾರಿಗೆ ಒತ್ತಡವನ್ನು ಹೇರಿ ಉಚಿತವಾಗಿ ಅಂಗಡಿಯನ್ನು ಪಡೆದುಕೊಳ್ಳುವ ಉದ್ದೇಶವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಅದರಿಂದ ಅವರ ಮೇಲಿನ ದ್ವೇಷದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನೀಡಿದ್ದ ಅಂಗಡಿಯಲ್ಲಿಯೇ ನಾನು ಸರಿಯಾದ ಬಾಡಿಗೆಯನ್ನು ತುಂಬಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಗ್ರಾಮ ಪಂಚಾಯಿತಿಯವರು ಕಾಯ್ದೆಯ ಅನುಸಾರ ಅಂಗಡಿಯನ್ನು ಕಬ್ಜೆಗೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಬಾಡಿಗೆಯನ್ನು ತುಂಬಲು ಸಾಕಷ್ಟು ಸಮಯವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನು ನಾನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ದಾವೆಯಲ್ಲಿ ಕೋರಿದ ಪರಿಹಾರಕ್ಕೆ ನಾನು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಸುಳ್ಳು ದಾವೆಗೆ ಅನುಕೂಲವಾಗುವಂತೆ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ